ಎದ್ದು ಕೋಣೆಯೊಳಗೆ ಹೋದಳು. ಸ್ವಲ್ಪ ಹೊತ್ತು ಇಬ್ಬರೂ ಹೊರಗೆ ಬರಲಿಲ್ಲ. ಗ್ಯಾನಿ ಕಿವಿಯಿಟ್ಟು ಒಳಗೆ ಏನಾಗುತ್ತಿದೆಯೆಂದು ಆಲಿಸಿದ. ಗುಸುಗುಸು ಮಾತು, ಅಲ್ಲಲ್ಲಿ ಗುಲಾಬಿ ಅಳು ಕೇಳಿ ಬರುತ್ತಿದ್ದವು. ಕೊನೆಗೆ ಅವರಿಬ್ಬರೂ ಒಟ್ಟಿಗೆ ಹೊರಗೆ ಬಂದರು. ಗುಲಾಬಿ ಪಕ್ಕದಲ್ಲೂ ಅಜಾನುಬಾಹು ದೇಹದಿಂದ ಮಾದೇವಣ್ಣ ಎದ್ದು ಕಾಣುತ್ತಿದ್ದ. ಅವನು ಹೊರಗೆ ಬರುತ್ತಿದ್ದಂತೆ ಗುಲಾಬಿಯ ಕಿಟ್ಟನ್ನು ಎತ್ತಿಕೊಂಡು ಹೊರಗೆ ಹೋಗಿ ಕಾರಲ್ಲಿ ಹಾಕಿಕೊಂಡ. ತಕ್ಷಣಕ್ಕೆ ಗ್ಯಾನಿ ಹೌಹಾರಿ 'ಏನಿದು? ಏನಿದು?' ಎಂದು ತನಗೆ ತಾನೇ ಕೇಳಿಕೊಳ್ಳುವಷ್ಟು ಹೇಳಿಕೊಂಡ. ಗುಲಾಬಿ ನಿಧಾನಕ್ಕೆ ಹೊರಗೆ ಕಾಲಿಟ್ಟಳು. ಅವಳನ್ನು ಹಿಂಬಾಲಿಸಿ ಗ್ಯಾನಿಯೂ ಹೊರಗೆ ಬಂದ.

ಗುಲಾಬಿ ನಿಧಾನಕ್ಕೆ ಕಾರಿನತ್ತ ಚಲಿಸುತ್ತಿದ್ದಂತೆ ಗ್ಯಾನಿ ಎಲ್ಲವೂ ಹೊಳೆಯತೊಡಗಿತ್ತು. ಗುಲಾಬಿಗೆ ಮೂರು ತಿಂಗಳು ಆಗದ್ದು, ತನ್ನೊಂದಿಗೆ ಜಗಳವಾಡಿ ಊರುಬಿಟ್ಟು ಹರಿಹರದಲ್ಲಿ ಇದ್ದದ್ದು, ಎಷ್ಟೇ ಬಲವಂತ ಮಾಡಿದ್ರೂ ತೌರುಮನೆ ಬಿಡಲಾರದೆ ಹೋಗಿದ್ದುದಕ್ಕೆಲ್ಲಾ ಕಾರಣಗಳು ನಿಧಾನಕ್ಕೆ ಗ್ಯಾನಿಗೆ ಗುಲಾಬಿ ಮಾದೇವಣ್ಣನ ಬಳಿ ಸಾಗುತ್ತಿದ್ದಂತೆ ತಿಳಿಯತೊಡಗಿದ್ದವು. ಮಾದೇವಣ್ಣನಲ್ಲಿ ಗತ್ತು ಜಾಸ್ತಿಯಿದ್ದುದರಿಂದ ಹಿಂದಿನ ಬಾಗಿಲನ್ನು ತೆರೆದು ತನ್ನ ಪಾಡಿಗೆ ತಾನು ಕಾಯುತ್ತಾ ಕೂತಿದ್ದ. ಗುಲಾಬಿ ಮಾತ್ರ ತೀವ್ರ ಹೊಯ್ದಾಟಕ್ಕೆ ಬಿದ್ದಿದ್ದಳು. ಕಾರಿನ ಒಳಹೋಗಿ ಮತ್ತೆ ಗ್ಯಾನಿಯ ಬಳಿ ಬಂದು ನಿಂತಳು. 'ಜ್ಞಾನೋಬ, ನನ್ನ ಕ್ಷಮಿಸು, ಮರೆತುಬಿಡು. ನನ್ನ ಪ್ರಾಣ ನನ್ನ ಮಾದೇವ. ನಾನೇನು ಮಾಡಲಾರೆ. ನಿನ್ನ ಕಂಡರೆ ನಂಗೆ ಕರುಣೆ ಹುಟ್ಟುತ್ತೆ. ಹೇಗಾದ್ರು ಸರಿ ಸುಖವಾಗಿರು. ನಾ ಬರ್ತೀನಿ' ಎಂದು ಹೇಳಿ ಸರಸರನೆ ಕಾರಿನಲ್ಲಿ ಹೋಗಿ ಕುಳಿತುಕೊಂಡಳು. ತಕ್ಷಣವೇ ಕಾರು ಹರಿಹರದ ಮುಖವಾಗಿ ಕತ್ತಲಲ್ಲಿ ಕರಗಿಹೋಯ್ತು. ಈಗ ಸ್ಟೇಷನ್ ಮುಟ್ಟುವುದರತ್ತ ಪೊಲೀಸರು ಮಗ್ನವಾಗಿದ್ದರು. ಕೆಂಚ ಗರಬಡಿದವನಂತೆ ನಿಂತಿದ್ದ ಗ್ಯಾನಿಯನ್ನು ಹಿಡಿದೆಳೆದು ಎದುರಿನ ಹೋಟಲಿನ ಕಟ್ಟೆ ಮೇಲೆ ತಂದು ಕೂರಿಸಿಕೊಂಡ. ಕೆಂಚನಿಗೆ ಭಾರಿ ಭಯವಾದ್ದರಿಂದ ಗ್ಯಾನಿಯನ್ನು ಏನೂ ಕೇಳಲು ಹೋಗದೆ 'ಮಲಕೋ' ಎಂದಷ್ಟೇ ಹೇಳಿ ತಾನೂ ತಡೆಯದ ನಿದ್ದೆಗೆ ವಶವಾದ.

ಕೆಂಚ ಬೆಳಿಗ್ಗೆಯೆದ್ದು ನೋಡುತ್ತಾನೆ. ಗ್ಯಾನಿಯ ಸುಳಿವೇ ಇಲ್ಲ. ಇಡೀ ಮಲೆಬೆನ್ನೂರೆಲ್ಲ ಸುತ್ತುಹಾಕಿ ಊರಿಗೇನಾದರೂ ಹೋಗಿರಬಹುದೆಂದು ಊಹಿಸಿ ಬಂದ. ಆದರೆ ಊರಲ್ಲಿಯೂ ಅವನ ಸುಳಿವಿರಲಿಲ್ಲ. ಹೀಗೆ ಗ್ಯಾನಿ ಸುಳಿವಿಲ್ಲದಂತಾಗಿ ಅನೇಕ ತಿಂಗಳುಗಳು ಕಳೆದಿವೆ. ಮೊಟ್ಟಮೊದಲು ಗ್ಯಾನಿ ಇಲ್ಲ ಗ್ಯಾನಿ ಇಲ್ಲ, ಎಂದು ಹುಯಿಲೆಬ್ಬಿಸಿ ಗಲಾಟೆ ಮಾಡಿದ ತುಕರಾಮಣ್ಣ ತುಳಜಕ್ಕರು ಈಗ ಗ್ಯಾನಿ ಬಗ್ಗೆ ಕೇಳಿದರೆ ದೀರ್ಘವಾಗಿ ನಿಟ್ಟುಸಿರುಬಿಡುತ್ತಾರೆ. ಕಣ್ಣು ಕಾಣದ ತುಳಜಕ್ಕ, ಕಿವಿಕೇಳದ ತುಕರಾಮಣ್ಣ ಕಷ್ಟದಿಂದ ಹುಡುಗರ ಚಡ್ಡಿ, ಹೆಂಗಸರ ಲಂಗ ಕುಪ್ಪಸ ಹೊಲೆದು ಅದೂ ಇದೂ ಸಂಪಾದಿಸುತ್ತಾ ನಿರ್ಲಿಪ್ತವಾಗಿ ಕಾಲ ನೂಕುತ್ತಿದ್ದಾರೆ. ಊರವರಿಗೆ ಇದ್ದ ಒಬ್ಬನೇ ಒಬ್ಬ ದರ್ಜಿ ಗ್ಯಾನಿ ಹೊಲಿದುಕೊಟ್ಟ ಅಂಗಿಗಳು ಹರಿಯುತ್ತಾ ಬಂದು ಗ್ಯಾನಿ ಹಾಗೂ ಗುಲಾಬಿಯರ ನೆನಪುಗಳು ಮರುಕಳಿಸುತ್ತಿವೆ. ಬದುಕಿದಷ್ಟು ದಿನವೂ ಗಲಾಟೆ, ಗದ್ದಲಗಳಿಂದ ಮಾತಾಗಿದ್ದ ಗ್ಯಾನಿ ಈಗ ಊರವರ ಬಾಯಲ್ಲಿ ಕತೆಯಾಗಿದ್ದಾನೆ.

⌘